ದಿ.16.06.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ನೀಡಲಾಯಿತು.

<u>ಪಾಟೀಸವಾಲು ಃ ಶ್ರೀ ಎಸ್.ಎಂ., ವಕೀಲರಿಂದ ಪ್ರತಿವಾದಿಯ ಪರವಾಗಿಃ</u>

15. ಪ್ರತಿವಾದಿಯು ನೇರವಾಗಿ ವಾದಿ ಬ್ಯಾಂಕಿಗೆ ಸಾಲದ ಬಗ್ಗೆ ಅರ್ಜಿ ಸಲ್ಲಿಸಿದ್ದರು. ಸಾಲದ ಅರ್ಜಿಯಲ್ಲಿ ಪ್ರತಿವಾದಿಯ ಸಂಪೂರ್ಣ ವಿಳಾಸ ಕೊಟ್ಟಿದ್ದರು ಎಂದರೆ ನಿಜ. ಪ್ರತಿವಾದಿಯು ತಮ್ಮ ಖಾಯಂ ವಿಳಾಸ ಏನು ಕೊಟ್ಟಿದ್ದರು ಅಂತ ದಾಖಲೆ ನೋಡಿ ಹೇಳುತ್ತೇನೆ. ಈ ನಾನು ನೋಡಿದ ನಿಪಿ-1 ರಿಂದ 5 ನಲ್ಲಿ ಪ್ರತಿವಾದಿಯ ಖಾಯಂ ವಿಳಾಸದ ದಾಖಲೆ ಅದರಲ್ಲಿ ಇಲ್ಲ, ಬ್ಯಾಂಕ್ ದಾಖಲೆಯಲ್ಲಿ ಇರುತ್ತದೆ. ಪ್ರತಿವಾದಿಯ ಖಾಯಂ ವಿಳಾಸ ಹೊಳೆ ಸಿರಿಗೆರೆ , ಹರಿಹರ ತಾಲೂಕು. ಪ್ರತಿವಾದಿಯ ಸಾಲದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಡಿಸ್ಟ್ರಿಕ್ಟ್ ಕೈಗಾರಿಕಾ ಇಲಾಖೆಯಿಂದ ಪ್ರತಿವಾದಿಗೆ ಸಾಲ ಮಂಜೂರು ಮಾಡಬೇಕು ಅಂತಾ ಅರ್ಜಿ ಬಂದಿತ್ತು. ಯಾವ ಘಟಕ ಸ್ಥಾಪನೆಗೋಸ್ಕರ ಸಾಲ ಪಡೆದುಕೊಂಡಿದ್ದರು ಎಂದರೆ ನಾನು ದಾಖಲೆಗಳನ್ನು ನೋಡಿ ಹೇಳುತ್ತೇನೆ. ಸಾಕ್ಷಿದಾರರು ಹೇಳುತ್ತಾರೆ ದಾಖಲೆಗಳು ಕೇಳಿದ್ದು ಬ್ಯಾಂಕಿನಲ್ಲಿ ಇರುತ್ತವೆ, ಅವುಗಳನ್ನು ತಂದು ಸಾಕ್ಷ್ಯ ಕೊಡುತ್ತೇನೆ.

(ಈ ಹಂತದಲ್ಲಿ ವಕೀಲರು ಸಮಯ ಕೋರಿದ್ದರಿಂದ, ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.)

<u>ಮರುವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.